

# ಸುಂದರ ಹೂಗಳ ಸ್ವೀಟ್ ವಿಲಿಯಂ



■ ಪ.ನಾ.ಹಳ್ಳಿ ಹರೀಶ್ ಕುಮಾರ್

ದಕ್ಷಿಣ ಯೂರೋಪ್, ಚೀನಾ, ಕೊರಿಯಾ, ರಷ್ಯಾ ಹಾಗೂ ಏಷ್ಯಾದ ಭಾಗಗಳಲ್ಲಿ ಯಥೇಚ್ಛವಾಗಿ ಕಂಡುಬರುವ ಸ್ವೀಟ್ ವಿಲಿಯಂ, ಮೂಲತಃ ಮೂಲಿಕಾ ಸಸ್ಯ. ಡಯಾಂಥಸ್ ಬಾರ್ಬಾಟಸ್ ಎಂಬ ಸಸ್ಯಶಾಸ್ತ್ರೀಯ ನಾಮಧೇಯವಿದೆ. 20ರಿಂದ 90 ಸೆಂಟಿಮೀಟರ್‌ಗಳಷ್ಟು ಎತ್ತರದವರೆಗೆ ಬೆಳೆಯಬಲ್ಲದು. ಕಾಂಡದ ತುದಿಯಲ್ಲಿ ಪ್ರತೀ ಗೊಂಚಲಿನಲ್ಲಿ ಸುಮಾರು 30ರಷ್ಟು ಹೂಗಳು ಅರಳುತ್ತವೆ. ತಲಾ ಐದು ದಳಗಳನ್ನು ಹೊಂದಿರುವ ಹೂಗಳು ಗುಲಾಬಿ, ನೇರಳೆ ಮತ್ತು ಕೆಂಪು ಬಣ್ಣಗಳಿಂದ ಕೂಡಿದ್ದು 2ರಿಂದ 3 ಸೆಂಟಿಮೀಟರ್‌ನಷ್ಟು ವ್ಯಾಸ ಹೊಂದಿರುತ್ತವೆ. ದಳಗಳ ತುದಿಗಳು ಗರಗಸದ ಹಲ್ಲುಗಳಂತೆ ಮೊನಚಾದ ಆಕಾರದಲ್ಲಿರುತ್ತವೆ. ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಹೂಗಳು ಅರಳುತ್ತವೆ.

18ನೇ ಶತಮಾನದಲ್ಲಿ ಆಳ್ವಿಕೆ ನಡೆಸಿದ್ದ ದಳಪತಿ, ವಿಲಿಯಂ ಎಂಬಾತ ಕಾಳಗವೊಂದರಲ್ಲಿ ವಿಜಯಿಯಾದ ನೆನಪಿಗೆ ಈ ಮೂಲಿಕೆ ಸಸ್ಯಕ್ಕೆ 'ಸ್ವೀಟ್ ವಿಲಿಯಂ' ಎಂದು ನಾಮಕರಣ ಮಾಡಲಾಯಿತು. ಈಗಲೂ ಅದೇ ಹೆಸರು ಜನಪ್ರಿಯ.

ಸ್ವೀಟ್ ವಿಲಿಯಂ ಅನ್ನು ಅಲಂಕಾರಿಕ ಸಸ್ಯವನ್ನಾಗಿಯೂ ಬೆಳೆಯಲಾಗುತ್ತಿದ್ದು ಉದ್ಯಾನವನಗಳಲ್ಲಿ ಕಂಡುಬರುತ್ತದೆ. ಸ್ವಾಭಾವಿಕ ಉದ್ಯಾನಗಳಲ್ಲಿ ಚಿಟ್ಟೆ, ಹಕ್ಕಿಗಳು ಹಾಗೂ ಜೇನು-ಹುಳುಗಳನ್ನು ಆಕರ್ಷಿಸಲು ಇವು ಸೂಕ್ತ ಗಿಡಗಳು. ಪರಾಗಸ್ಪರ್ಶ ಮತ್ತು ಅದಿಲ್ಲದೆಯೂ ಸಂತಾನೋತ್ಪತ್ತಿ ನಡೆಸುವ ಸ್ವೀಟ್ ವಿಲಿಯಂ ಮೂಲಿಕೆಯು ಲವಂಗದಂತಹ ಘಾಟನ್ನು ಹೊಂದಿದೆ. ಹಾಗಾಗಿ ಇದನ್ನು ಬೇಕರಿ ಪದಾರ್ಥ-ಗಳು, ಹುಳಿ, ಸಾಂಬಾರು ಹಾಗೂ ಪಚ್ಚಡಿ ತಯಾರಿಕೆಯಲ್ಲಿ ಕಚ್ಚಾವಸ್ತುವನ್ನಾಗಿಯೂ ಬಳಸುತ್ತಾರೆ.

